**ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಸ್ಥಾಪನೆ**
**ಇಲಾಖೆಯ ಗಣಕೀಕರಣದ ಮೈಲಿಗಲ್ಲುಗಳು**
**ಸ್ಪರ್ಶ ಪರದೆ ಕಿಯೋಸ್ಕ್**
**ಗ್ಯಾಸೆಟಿಯರ್ ಹಿನ್ನಲೆ**
**ಪ್ರಸ್ತುತ ಮಾರಾಟಕ್ಕೆ ಲಭ್ಯವಿರುವ ಪ್ರತಿಗಳ ದರಪಟ್ಟಿ**

## ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಸ್ಥಾಪನೆ

ಕೇಂದ್ರ ಸರಕಾರವು 1955ರಲ್ಲಿ ನೇಮಿಸಿದ ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಗ್ಯಾಸೆಟಿಯರಿನ ಪರಿಕಲ್ಪನೆ ಉಗಮಗೊಂಡಿತು. ಕೇಂದ್ರ ಗ್ಯಾಸೆಟಿಯರ್ ಯೋಜನೆಯ ಮೇರೆಗೆ, ಪ್ರತೀ ರಾಜ್ಯವೂ ಗ್ಯಾಸೆಟಿಯರುಗಳ ಪ್ರಕಟಣಾ ಕಾರ್ಯ ಕೈಗೊಳ್ಳಬೇಕೆಂಬ ಕೇಂದ್ರ ಸರಕಾರದ ಆದೇಶದಂತೆ ಎಲ್ಲ ರಾಜ್ಯಗಳೂ ಈ ಕಾರ್ಯವನ್ನು ಪ್ರಾರಂಭಿಸಿದವು. ಇದರ ಸಲುವಾಗಿ ಅವಶ್ಯವಾದ ಕಚೇರಿ, ಸಿಬ್ಬಂದಿ, ಮುಂತಾದವುಗಳನ್ನು ತಂತಮ್ಮ ರಾಜ್ಯಗಳಲ್ಲಿ ಒದಗಿಸಿಕೊಂಡವು

ಮೈಸೂರು ರಾಜ್ಯವೂ 1958ರಲ್ಲಿ ಗ್ಯಾಸೆಟಿಯರ್ ಘಟಕವನ್ನು ರಾಜಧಾನಿ ಬೆಂಗಳೂರಿನಲ್ಲಿ ಸ್ಥಾಪಿಸಿ, ಇದನ್ನು 'ಸಾಮಾನ್ಯ ಆಡಳಿತ ಇಲಾಖೆ' ಯ ಅಧೀನಕ್ಕೊಳಪಡಿಸಿತು. ನಂತರದಲ್ಲಿ ಈ ಘಟಕ 1986ರಲ್ಲಿ ಒಂದು ಖಾಯಂ ಇಲಾಖೆಯಾಗಿ ಮಾರ್ಪಟ್ಟು, 'ವಾರ್ತಾ ಮತ್ತು ಯುವಜನ ಸೇವೆ'ಯ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಿತು. ಆನಂತರ 1996ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯ ಇಲಾಖೆಯು ಆರಂಭಗೊಂಡ ಮೇಲೆ ಗ್ಯಾಸೆಟಿಯರ್ ಇಲಾಖೆಯು ಅದರ ಅಧೀನ ಇಲಾಖೆಯಾಗಿ ವರ್ಗಾಯಿಸಲ್ಪಟ್ಟಿತು.

ಪ್ರಾರಂಭದಲ್ಲಿ ಗ್ಯಾಸೆಟಿಯರ್‌ಗಳ ಪ್ರಕಟಣೆಗಾಗಿ ಕೇಂದ್ರ ಸರ್ಕಾರದಿಂದ ಸ್ವಲ್ಪಮಟ್ಟಿಗೆ ಆರ್ಥಿಕ ನೆರವು ನೀಡಲಾಗುತ್ತಿತ್ತು. ಆದರೆ, 1980ರ ನಂತರ ರಾಜ್ಯ ಗ್ಯಾಸೆಟಿಯರ್ ಸಂಪುಟಗಳನ್ನು ಹೊರತುಪಡಿಸಿ ಈ ನೆರವನ್ನು ನಿಲ್ಲಿಸಲಾಯಿತು. ನಂತರ ಜಿಲ್ಲಾ ಗ್ಯಾಸೆಟಿಯರ್ ಸಂಪುಟಗಳ ಪ್ರಕಟಣೆಯನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರವು ನಿರಂತರ ಚಾಲ್ತಿಯಲ್ಲಿರುವ ಯೋಜನೆಯಡಿಯಲ್ಲಿ ಕೈಗೊಳ್ಳುತ್ತಿದೆ.

ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಗ್ಯಾಸೆಟಿಯರುಗಳನ್ನು ಪ್ರಕಟಿಸಿರುವ ಈ ಇಲಾಖೆಯ ಮುಖ್ಯಸ್ಥರಾಗಿ ಮುಖ್ಯ ಸಂಪಾದಕರು ಹಾಗೂ ಇವರಿಗೆ ಸಂಪಾದನೆ ಮತ್ತು ಪ್ರಕಟಣಾ ಕಾರ್ಯದಲ್ಲಿ ಸಹಕರಿಸಲು ಇಬ್ಬರು ಹಿರಿಯ ಸಂಪಾದಕರು, ಹತ್ತು ಸಂಪಾದಕರು, ಐದು ಅನ್ವೇಷಕರು ಮತ್ತು ಉಳಿದ ಕಚೇರಿ ಸಿಬ್ಬಂದಿಯನ್ನು ಹೊಂದಿದೆ. ಇಲಾಖೆಯು ಅತ್ಯಂತ ಅಮೂಲ್ಯವಾದ ಗ್ರಂಥಾಲಯವನ್ನು ಹೊಂದಿದೆ. ಗ್ಯಾಸೆಟಿಯರ್ ಸಂಪುಟದ ಯಥಾರ್ಥಗಳ ಪ್ರಮಾಣೀಕರಣಕ್ಕೆ ತಜ್ಞರ ಸಲಹಾ ಸಮಿತಿಯನ್ನು ಹೊಂದಿದೆ. ಈ ಸಮಿತಿ ಕಾಲಕಾಲಕ್ಕೆ ಸೇರಿ, ಸಂಪಾದಕ ಮಂಡಳಿ ತಯಾರು ಮಾಡಿದ ಅಧ್ಯಾಯಗಳನ್ನು ವಿಮರ್ಶಿಸಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತದೆ. ರಾಜ್ಯದ ಮುಖ್ಯ ಕಾರ್ಯದರ್ಶಿಯವರು ಅಧ್ಯಕ್ಷರಾಗಿರುವ ಮೇಲ್ಕಂಡ ಸಮಿತಿಯಲ್ಲಿ ಹಲವಾರು ಇತಿಹಾಸ ತಜ್ಞರು, ಭಾಷಾ ಕೋವಿದರೂ, ಸಂಬಂಧಿಸಿದ ಜಿಲ್ಲೆಯ ಇಬ್ಬರು ವಿಶೇಷ ಪರಿಣತರೂ ಸದಸ್ಯರಾಗಿರುವುದರಿಂದ ಇಲಾಖಾ ಪ್ರಕಟಣೆಗಳು ಮಾನ್ಯವಾಗಿವೆ ಹಾಗೂ ಸಂಶೋಧನೆಗೆ ಆಕರ ಗ್ರಂಥಗಳಾಗಿವೆ.

ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು ತಾತ್ಕಾಲಿಕ ಆಧಾರದ ಮೇಲೆ 1958 ರಲ್ಲಿ ಅಸ್ತಿತ್ವಕ್ಕೆ ಬಂದು ಭಾರತದ ಗ್ಯಾಸೆಟಿಯರ್ ಘಟಕವು ನಿರೂಪಿಸಿದ ಗ್ಯಾಸೆಟಿಯರ್ ಸಂಕಲನೆಯ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಿ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಂಡಿತು. ಈ ಯೋಜನೆಯನ್ವಯ ಗ್ಯಾಸೆಟಿಯರ್ ಇಲಾಖೆಯು ಅಂದಿನ ಎಲ್ಲಾ 20 ಜಿಲ್ಲೆಗಳ ಗ್ಯಾಸೆಟಿಯರ್ ಸಂಪುಟಗಳನ್ನು 1990 ರ ವೇಳೆಗೆ ಪ್ರಕಟಗೊಳಿಸುವಲ್ಲಿ ಯಶಸ್ವಿಯಾಯಿತು. ಇದಲ್ಲದೆ 1982–1984 ರ ನಡುವೆ ಪ್ರಥಮ ಬಾರಿಗೆ ರಾಜ್ಯ

ಗ್ಯಾಸೆಟಿಯರ್ ಸಂಪುಟಗಳನ್ನು (ಎರಡು ಭಾಗಗಳಲ್ಲಿ) ಪ್ರಕಟಿಸಿದ ರಾಜ್ಯವೆಂಬ ಹೆಗ್ಗಳಿಕೆಗೆ ಕರ್ನಾಟಕವು ಪಾತ್ರವಾಯಿತು. ಹತ್ತು ವರ್ಷಗಳ ನಂತರ ರಾಜ್ಯ ಗ್ಯಾಸೆಟಿಯರ್‌ಗೆ 19 ರಲ್ಲಿ ದರ ವಾರ್ಷಿಕ ಪುರವಣಿಯನ್ನು ಪ್ರಕಟಿಸಲಾಯಿತು. ಅಲ್ಲದೆ ರಾಜ್ಯ ಗ್ಯಾಸೆಟಿಯರ್‌ನ ಕನ್ನಡ ಅನುವಾದ 19 19 ರ ಅವಧಿಯಲ್ಲಿ 3 ಸಂಪುಟಗಳಲ್ಲೂ 19 ರಲ್ಲಿ ಅದರ ದಶವಾರ್ಷಿಕ ಪುರವಣಿಯನ್ನು ಪ್ರಕಟಿಸಲಾಯಿತು. ಈ ಮಾಲಿಕೆಗಳು ಪ್ರಕಟಗೊಂಡ ಮೇಲೆ 1992 ರಿಂದ ಇಲಾಖೆಯು ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕೃತ ಆವೃತ್ತಿಗಳನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸುವ ನೂತನ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಈ ಯೋಜನೆಯಡಿಯಲ್ಲಿ ಕೊಡಗು, ಧಾರವಾಡ, ಗುಲಬರ್ಗಾ, ವಿಜಾಪುರ ಹಾಗೂ ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ ಸಂಪುಟಗಳನ್ನು ಇಲ್ಲಿಯವರೆಗೆ ಇಲಾಖೆಯು ಪ್ರಕಟಿಸಿರುತ್ತದೆ. ನಂತರ ಮುಖ್ಯ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವ ಗ್ಯಾಸೆಟಿಯರ್ ಇಲಾಖೆಯ ಸಲಹಾ ಸಮಿತಿಯ ನಿರ್ಣಯದಂತೆ ಕನ್ನಡೇತರರಿಗೆ ಹಾಗೂ ಹೊರ ರಾಜ್ಯಗಳಿಗೆ ಈ ಸಂಪುಟಗಳನ್ನು ಒದಗಿಸುವ ದೃಷ್ಟಿಯಿಂದ ಈ ಪರಿಷ್ಕೃತ ಕನ್ನಡ ಸಂಪುಟಗಳ ಆಂಗ್ಲ ಅವತರಿಣಿಕೆಗಳನ್ನು ಪ್ರಕಟಿಸುವ ಕಾರ್ಯಕ್ರಮವನ್ನು ಇಲಾಖೆಯು ಹಮ್ಮಿಕೊಂಡಿತು. ಈ ಯೋಜನೆಯಂತೆ ಕೊಡಗು ಹಾಗೂ ಧಾರವಾಡ ಜಿಲ್ಲಾ ಗ್ಯಾಸೆಟಿಯರ್‌ಗಳ ಆಂಗ್ಲ ಆವೃತ್ತಿಗಳನ್ನು (1993 ಮತ್ತು 2003ರಲ್ಲಿ) ಇಲಾಖೆಯು ಪ್ರಕಟಿಸಿದೆ.

ಗ್ಯಾಸೆಟಿಯರ್ ಸಂಪುಟಗಳೇ ಅಲ್ಲದೆ ಪ್ರವಾಸೋದ್ಯಮವನ್ನು ಉತ್ತೇಜಿಸಲು ಹಾಗೂ ಯಾತ್ರಿಕರಿಗೆ ಅತ್ಯಗತ್ಯ ಮಾಹಿತಿ ನೀಡುವ ದೃಷ್ಟಿಯಿಂದ ಇಲಾಖೆಯು 1995–1996 ರಲ್ಲಿ ಕರ್ನಾಟಕ ಕೈಪಿಡಿ (A Hand book of Karnataka) ಎಂಬ ಸಂಕ್ಷಿಪ್ತ ಸಂಪುಟವನ್ನು ಪ್ರಕಟಿಸಿರುವುದು ಇಲಾಖೆಯ ಸಾಧನೆಯಾಗಿದೆ . ಆಂಗ್ಲ ಭಾಷೆಯ ಕರ್ನಾಟಕ ಕೈಪಿಡಿಯು ಪರಿಷ್ಕೃತಗೊಂಡು 2000ದಲ್ಲಿ ಪುನ: ಮುದ್ರಣಗೊಂಡಿತು. ಈ ಸಂಪುಟಗಳು ರಾಜ್ಯ ಲೋಕಸೇವಾ ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆಕರ ಗ್ರಂಥವಾಗಿ ಸಹ ಉಪಯುಕ್ತವಾಗಿವೆ. ಸ್ವಾತಂತ್ರ್ಯಪೂರ್ವದಲ್ಲಿ ನೂರು ವರ್ಷಗಳಿಗೂ ಹಿಂದೆ ಪ್ರಕಟಗೊಂಡ ಗ್ಯಾಸೆಟಿಯರ್/ಮ್ಯಾನ್ಯುಯಲ್‌ಗಳನ್ನು ಆಕರತೆ ಹಾಗೂ ಸಂರಕ್ಷಣೆಯ ದೃಷ್ಟಿಯಿಂದ ಪುನರ್ ಮುದ್ರಣ ಮಾಡುವ ಯೋಜನೆಯನ್ನು ಇಲಾಖೆಯು ಸಲಹಾ ಸಮಿತಿಯ ನಿರ್ಣಯದಂತೆ ಹಮ್ಮಿಕೊಂಡಿತು. ಈ ಯೋಜನೆಯಡಿಯಲ್ಲಿ ಈಗಾಗಲೇ ಮುಂಬಯಿ ಪ್ರಾಂತ್ಯದ ಸರ್.ಜೇಮ್ಸ್ ಕ್ಯಾಂಬೆಲ್ ಸಂಪಾದಿಸಿರುವ ಬಿಜಾಪುರ ಗ್ಯಾಸೆಟಿಯರ್‌ಅನ್ನು ಆಧುನಿಕ ಗಣಕ ತಂತ್ರಜ್ಞಾನವನ್ನು ಬಳಸಿ ಸ್ಕ್ಯಾನ್ ಮಾಡಿಸಿ ಯಥಾವತ್ತಾಗಿ ಮುದ್ರಿಸಿ 2000 ದಲ್ಲಿ ಪ್ರಕಟಿಸಲಾಯಿತು. ಈ ಗ್ರಂಥದಲ್ಲಿ ಲಭ್ಯವಿರುವ ಅತ್ಯಂತ ಹಳೆಯ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ಇದೇ ಯೋಜನೆಯಡಿಯಲ್ಲಿ ಈಗ ಇಲಾಖೆಯು ಪ್ರಕಟಿಸಿರುವ ಪುನರ್ ಮುದ್ರಿತ ಧಾರವಾಡ, ಕೆನರಾ (ಉತ್ತರ ಕನ್ನಡ) ಮತ್ತು ಸೌತ್ ಕೆನರಾ (ದಕ್ಷಿಣ ಕನ್ನಡ) ಇತ್ತೀಚೆಗೆ ಬಿಡುಗಡೆಯಾಗಿವೆ. ಇವುಗಳ ಹಳೇ ಆವೃತ್ತಿಗಳು ರಾಜ್ಯದ ಯಾವುದೇ ಗ್ರಂಥಾಲಯಗಳಲ್ಲಿ ಸಾಮಾನ್ಯವಾಗಿ ಲಭ್ಯವಿರುವುದಿಲ್ಲ, ಒಂದು ವೇಳೆ ಲಭ್ಯವಿದ್ದರೂ ಅವು ಶಿಥಿಲವಾದ ಸ್ಥಿತಿಯಲ್ಲಿರುತ್ತವೆ. ಈಗ ಪ್ರಕಟಿಸಿರುವ ಈ ಗ್ರಂಥವು ಸಂಶೋಧಕರಿಗೆ, ಆಸಕ್ತಿಯುತ ಓದುಗರಿಗೆ ಹಾಗೂ ವಿದ್ವಾಂಸರಿಗೆ ಉತ್ತಮ ಆಕರ (Reference volume) ಗ್ರಂಥವಾಗಿ ಲಭಿಸುವಂತಾಗಿದೆ.

ಪ್ರಸ್ತುತ ವರ್ಷದಲ್ಲಿ ಇಲಾಖೆಯು ಕೋಲಾರ ಜಿಲ್ಲಾ ಗ್ಯಾಸೆಟಿಯರ್‌ನ ಪರಿಷ್ಕೃತ ಆವೃತ್ತಿಯನ್ನು ಹೊರತರುವುದರ ಜೊತೆಗೆ ಗುಲಬರ್ಗಾ (ಆಂಗ್ಲ ಆವೃತ್ತಿ) ಜಿಲ್ಲಾ ಗ್ಯಾಸೆಟಿಯರ್ ಹಾಗೂ ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಮೈಸೂರು ಮತ್ತು ಕೂರ್ಗ್ (ಮೂರು ಸಂಪುಟಗಳು) ಹಾಗೂ ಬೆಳಗಾವಿ ಗ್ಯಾಸೆಟಿಯರ್‌ಗಳ ಮರುಮುದ್ರಣ ಕಾರ್ಯಗಳನ್ನು ಹಮ್ಮಿಕೊಂಡಿದೆ. ಈ ಇಲಾಖೆಯು ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ರಾಜ್ಯದ ಪ್ರಥಮ ಹಾಗೂ ಪ್ರತಿಷ್ಠಿತ ಸಂಪುಟವಾದ ಪ್ರವಾಸಿ ಗ್ಯಾಸೆಟಿಯರ್ (ಆಂಗ್ಲ ಭಾಷೆಯಲ್ಲಿ)

ಅನ್ನು ಎರಡು ಸಚಿತ್ರ ಸಂಪುಟಗಳಲ್ಲಿ ಇದೇ ಸಾಲಿನಲ್ಲಿ ಪ್ರಕಟಿಸಲಿದೆ. ಇದರಲ್ಲಿ ರಮಣೀಯ ನೈಸರ್ಗಿಕ ಹಾಗೂ ಐತಿಹಾಸಿಕ ಪ್ರಾಮುಖ್ಯತೆವುಳ್ಳ ಅನೇಕ ಅಜ್ಞಾತ ಸ್ಥಳಗಳನ್ನು, ಆಕರ್ಷಕ ಛಾಯಾಚಿತ್ರಗಳ ಹಾಗೂ ಪ್ರವಾಸಿಗರಿಗೆ ಅವಶ್ಯಕವಾದ ಮಾಹಿತಿಗಳನ್ನು ಅಳವಡಿಸಲಾಗುವುದು.

## ಇಲಾಖೆಯ ಗಣಕೀಕರಣದ ಮೈಲಿಗಲ್ಲುಗಳು

ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳು ಹಮ್ಮಿಕೊಂಡ ಇ' ಆಡಳಿತ (ವಿದ್ಯುನ್ಮಾನ ಆಡಳಿತ) ಕಾರ್ಯಕ್ರಮಕ್ಕೆ ಕ್ಷಿಪ್ರವಾಗಿ ಸ್ಪಂದಿಸುವ ದೃಷ್ಟಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಸಚಿವರು ಹಾಗೂ ಕಾರ್ಯದರ್ಶಿಗಳ ದೂರದರ್ಶಿತ್ವದ ಮಾರ್ಗದರ್ಶನದ ಮೇಲೆ ಇಲಾಖೆಯು ಗಣಕೀಕರಣವನ್ನು ಯೋಜನೇತರ ಕಾರ್ಯಕ್ರಮದಡಿಯಲ್ಲಿ 2002–2003ರಲ್ಲಿ ಆರಂಭಿಸಿತು. ಈ ಯೋಜನೆಯು ಕಾರ್ಯರೂಪಕ್ಕೆ ಬರುವ ವೇಳೆಗೆ ಆಗಲೇ ಇಲಾಖೆಯು 1884ರಲ್ಲಿ ಮುಂಬೈ ಪ್ರಾಂತ್ಯವು ಸರ್ ಜೇಮ್ಸ್ ಕ್ಯಾಂಬೆಲ್‌ಅವರು ಸಂಪಾದಿಸಿದ್ದ ಶಿಥಿಲವಾಗಿದ್ದ ಹಾಗೂ ನಶಿಸಿಹೋಗುತ್ತಿದ್ದ ಬಿಜಾಪುರ ಗ್ಯಾಸೆಟಿಯರ್ ಸಂಪುಟವನ್ನು (2002) ಆಧುನಿಕ ಕಂಪ್ಯೂಟರ್ ತಂತ್ರಜ್ಞಾನವನ್ನು ಉಪಯೋಗಿಸಿ ('ವ್ಯಾಸ' ಎಂಬ ಸಾಫ್ಟ್‌ವೇರ್ ಟೂಲ್ ಮುಖೇನ ಸ್ಕ್ಯಾನ್ ಮಾಡಿ) ಪುನರ್ ಮುದ್ರಿಸಲಾಗಿತ್ತು. ಇದೇ ಪ್ರಥಮಬಾರಿಗೆ ಈ ಸಂಪುಟದ ಪುಟಗಳನ್ನು ಸಿ.ಡಿ.' ಸ್ವರೂಪದಲ್ಲಿ ಸಂರಕ್ಷಿಸಲಾಯಿತು. ಒಂದು ದೃಷ್ಟಿಯಲ್ಲಿ ಇಲಾಖೆ ಪ್ರಕಟಿಸಿದ ಪ್ರಥಮ ಇ'ಸಂಪುಟವು ಬಿಜಾಪುರ (1884) ಗ್ಯಾಸೆಟಿಯರ್ ಆಗಿತ್ತು. ಆದರೆ, ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟವಾಗಿದ್ದ ಗ್ಯಾಸೆಟಿಯರ್ ಸಂಪುಟಗಳು ಹಾಗೂ 1958ರ ನಂತರ ಪ್ರಕಟಗೊಂಡಿದ್ದ ಸಂಪುಟಗಳನ್ನು ಆಧುನಿಕ ತಂತ್ರಾಂಶಗಳ ಮೂಲಕ ಸ್ಕ್ಯಾನ್ ಮಾಡಿಸುವ ಗಣಕೀಕರಣ ಕಾರ್ಯಕ್ರಮವು ಇಲಾಖೆಗೆ ಪ್ರಮುಖ ಸವಾಲಾಗಿತ್ತು. ಈ ಸಂದರ್ಭದಲ್ಲಿ ಇಲಾಖಾ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯದ ಮಾಹಿತಿ ತಂತ್ರಜ್ಞಾನ ಪರಿಣತರ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಯ ನಿರ್ದೇಶಕರನ್ನೊಳಗೊಂಡ ಒಂದು ಗಣಕೀಕರಣ ತಾಂತ್ರಿಕ ಸಲಹಾ ಸಮಿತಿಯು ನೀಡಿದ ಅಮೂಲ್ಯ ಸಲಹೆಗಳಿಂದ ಇಲ್ಲಿಯವರೆಗೆ ಇಲಾಖೆಯು ಪ್ರಕಟಿಸಿದ್ದ ಎಲ್ಲಾ ಸಂಪುಟಗಳನ್ನು ಸ್ಕ್ಯಾನ್ ಮಾಡಿಸಿ ಸಿ.ಡಿ.ಗಳಲ್ಲಿ ಸೆರೆಹಿಡಿದಿಡಲು ಸಾಧ್ಯವಾಯಿತು. ಸುಮಾರು 60,000 ಪುಟಗಳ ಮಾಹಿತಿಯುಳ್ಳ 91 ಸಂಪುಟಗಳನ್ನು ಕೇವಲ 9 ಸಿ.ಡಿ.ಗಳಲ್ಲಿ ಅಧಿಕ ತಂತ್ರಾಂಶದಿಂದ ಸ್ಕ್ಯಾನ್ ಮಾಡಿ ಅಳವಡಿಸಲಾಗಿರುವುದು ಅತ್ಯಂತ ಪರಿಶ್ರಮದ ಸಾಧನೆಯಾಗಿದೆ. ಈ ಸಿ.ಡಿ.ಗಳಲ್ಲಿ ಹುಡುಕಾಟದ (ಸರ್ಚ್) ವಿಶೇಷ ಸೌಲಭ್ಯವನ್ನು ಹೊಂದಿದ್ದು, ಯಾವುದೇ ವಿಷಯದ ಬಗ್ಗೆ ಅಥವಾ ಮಾಹಿತಿಯ ಬಗ್ಗೆ ಪ್ರಾಧಾನ್ಯತೆಯಿಂದ ಗುರುತಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಅಲ್ಲದೇ ಜಟಿಲ ತರ್ಕದೊಂದಿಗೆ ಹುಡುಕಬಲ್ಲ ವಿಶೇಷ ಸೌಲಭ್ಯವನ್ನು ಹೊಂದಿರುತ್ತದೆ. ಈ ಸಿ.ಡಿ. ಆವೃತ್ತಿಗಳನ್ನು ಪ್ರಕಟಿಸುವುದರೊಂದಿಗೆ ಇಲಾಖೆಯು ಇಲ್ಲಿಯವರೆಗೆ ಲಭ್ಯವಿರುವ ಹಾಗೂ ಪ್ರಕಟವಾಗಿರುವ ಆಂಗ್ಲ ಭಾಷಾ ಗ್ಯಾಸೆಟಿಯರ್‌ಗಳ ಸ್ಕ್ಯಾನಿಂಗ್ ಕಾರ್ಯವನ್ನು ಮುಗಿಸಿ ಒಂದು ಮೈಲಿಗಲ್ಲನ್ನು ದಾಟಿರುತ್ತದೆ. ಅಲ್ಲದೇ ಈ ಸಿ.ಡಿ.ಗಳನ್ನು ಮತ್ತು ಮಂಡ್ಯ ಜಿಲ್ಲಾ ಗ್ಯಾಸೆಟಿಯರ್‌ನ ಪ್ರಥಮ ಕನ್ನಡ ಸಿ.ಡಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಸರಣಗೊಳಿಸಲಾಗಿದೆ.

## ಸ್ಪರ್ಶ ಪರದೆ ಕಿಯೋಸ್ಕ್ (Touch Screen Kiosks)

ಪ್ರಸಕ್ತ ಸಾಲಿನಲ್ಲಿ ಇಲಾಖೆಯು ಹಮ್ಮಿಕೊಂಡಿರುವ ಗಣಕೀಕರಣ ಕಾರ್ಯಕ್ರಮದ ಇನ್ನೊಂದು ಮೈಲಿಗಲ್ಲೆಂದರೇ ಆಸಕ್ತಿಯುತ ಸಂಶೋಧಕರ ಹಾಗೂ ಸಾಮಾನ್ಯ ಜನತೆಯ ಬಳಿಗೆ ಕಿಯೋಸ್ಕ್ ಸ್ಪರ್ಶಪರದೆ ತಂತ್ರಜ್ಞಾನದ ಮೂಲಕ ಗ್ಯಾಸೆಟಿಯರ್ ಸಂಪುಟಗಳಲ್ಲಿ ಅಡಕವಾಗಿರುವ ಜ್ಞಾನ ಭಂಡಾರವನ್ನು ಕೊಂಡೊಯ್ದು

ಪರಿಚಯಿಸುವುದೇ ಆಗಿದೆ. ಈಗಾಗಲೇ ನಾಲ್ಕು ಕಿಯೋಸ್ಕ್ ಸೂಕ್ಷ್ಮಪರದೆ ಕಂಪ್ಯೂಟರ್‌ಗಳನ್ನು ಬೆಂಗಳೂರಿನ ಕರ್ನಾಟಕ ಗ್ಯಾಸೆಟಿಯರ್ ಕಚೇರಿಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿರುವ ಕನ್ನಡ ಭವನದಲ್ಲಿ, ಮೈಸೂರು ಅರಮನೆ ಆವರಣದಲ್ಲಿರುವ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಮತ್ತು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ.ಬಸವನಾಳ ಗ್ರಂಥಾಲಯದಲ್ಲಿ ಸ್ಥಾಪಿಸಲಾಗಿದೆ. ಈ ಕಿಯೋಸ್ಕ್‌ಗಳಲ್ಲಿ ಗ್ಯಾಸೆಟಿಯರ್ ಸಂಪುಟಗಳ ಜೊತೆಗೆ ಇಲಾಖೆಯು ಇದೇ ಹಣಕಾಸು ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಪ್ರಕಟಿಸಲಿರುವ ಕರ್ನಾಟಕ ಪ್ರವಾಸಿ ಗ್ಯಾಸೆಟಿಯರ್ ಸಂಪುಟವನ್ನು ಅಳವಡಿಸಿ ಪ್ರಸರಣಗೊಳಿಸಲಾಗುವುದು. ಕರ್ನಾಟಕದಲ್ಲಿರುವ ಆಕರ್ಷಕ ಪ್ರವಾಸಿ ತಾಣಗಳನ್ನು ಜನತೆಗೆ ಹಾಗೂ ಯಾತ್ರಿಕರಿಗೆ ಪರಿಚಯಿಸುವ ಮೂಲಕ ರಾಜ್ಯದಲ್ಲಿ ಪ್ರವಾಸೋದ್ಯಮ ಸಾಧ್ಯತೆಗಳನ್ನು ಅಧಿಕಗೊಳಿಸುವುದು ಇಲಾಖೆಯ ಉದ್ದೇಶವಾಗಿದೆ. ರಾಜ್ಯ ಪುರಾತತ್ವ ಇಲಾಖೆಯ ಸಂರಕ್ಷಿತ ದೇವಾಲಯ ಹಾಗೂ ಅವಶೇಷಗಳ ಮತ್ತು ರಾಜ್ಯ ವಸ್ತುಸಂಗ್ರಹಾಲಯಗಳಲ್ಲಿರುವ ಪ್ರದರ್ಶಿತ ವಸ್ತುಗಳ ಸಚಿತ್ರ ಮಾಹಿತಿಯನ್ನು ಈ ಕಿಯೋಸ್ಕ್‌ಗಳಲ್ಲಿ ಅಳವಡಿಸಲಾಗುವುದು. ಹಾಗೆಯೇ, ರಾಜ್ಯ ಪತ್ರಾಗಾರ ಇಲಾಖೆಯು ಸ್ಕ್ಯಾನ್ ಮಾಡಿ ತಯಾರಿಸಿರುವ ಐತಿಹಾಸಿಕ ದಾಖಲೆಗಳನ್ನೂ ಇವುಗಳಲ್ಲಿ ಅಳವಡಿಸಲಾಗುವುದು. ಈ ಕಿಯೋಸ್ಕ್‌ಗಳು ಮೌಸ್‌ನ ಸಹಾಯವಿಲ್ಲದೇ ಉಪಯೋಗಿಸುವವರ ಕೈ ಬೆರಳುಗಳ (ಮೌಸ್ ರೂಪದಲ್ಲಿ) ಮೂಲಕವೇ ಸೂಕ್ಷ್ಮಪರದೆಯನ್ನು ಸ್ಪರ್ಶ ಮಾಡಿದರೆ ಕಿಯೋಸ್ಕ್ ಯಂತ್ರವು ಸ್ವಯಂ ಚಾಲನೆಯನ್ನು ಪಡೆದು ಹಂತಹಂತವಾಗಿ ಅದರಲ್ಲಿ ಅಡಗಿರುವ ಗ್ಯಾಸೆಟಿಯರ್‌ಗಳ ಜ್ಞಾನ ಭಂಡಾರವು ಹಾಗೂ ಇತರೆ ಮಾಹಿತಿಗಳು ತೆರೆದುಕೊಳ್ಳುತ್ತಾ ಹೋಗುತ್ತದೆ. 'ಕಿಯೋಸ್ಕ್' ಕಂಪ್ಯೂಟರ್‌ಗಳ ಸ್ಥಾಪನೆಯು ಇಲಾಖೆಯ ಗಣಕೀಕರಣದ ಯೋಜನೆಯಲ್ಲಿ ಮಹತ್ವದ ಹೆಜ್ಜೆಯಾಗಿದೆ. ಇನ್ನು ಮುಂದೆ ಇಲಾಖೆಯು ಪ್ರಕಟಿಸುವ ಎಲ್ಲಾ ಸಂಪುಟಗಳನ್ನು 'ಕಿಯೋಸ್ಕ್' ಕಂಪ್ಯೂಟರ್‌ಗಳಲ್ಲಿ ಹಂತಹಂತವಾಗಿ ಅಳವಡಿಸಲಾಗುವುದು.

**ಗ್ಯಾಸೆಟಿಯರ್ ಹಿನ್ನಲೆ:**

ಕರ್ನಾಟಕವು ಗ್ಯಾಸೆಟಿಯರ್‌ಗಳ ಪ್ರಕಟಣೆಯಲ್ಲಿ ಅತ್ಯಂತ ವಿಶಿಷ್ಟ ಸಂಪ್ರದಾಯವನ್ನು ಹೊಂದಿದೆ. ಬ್ರಿಟೀಷ್ ಸರ್ಕಾರವು ಆಡಳಿತವನ್ನು ಸಂಪೂರ್ಣವಾಗಿ ತನ್ನ ಹತೋಟಿಗೆ ತೆಗೆದುಕೊಂಡಾಗ ಅನೇಕ ಆಡಳಿತಾತ್ಮಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಭಾರತೀಯ ಪ್ರಾಂತ್ಯ ಹಾಗೂ ಜಿಲ್ಲೆಗಳಿಗೆ ಆಂಗ್ಲ ಹಾಗೂ ಯೂರೋಪಿಯನ್ ಅಧಿಕಾರಿಗಳನ್ನು ನೇಮಕ ಮಾಡಬೇಕಾಯಿತು. 1867ರ ವೇಳೆಗಾಗಲೇ ಬ್ರಿಟನ್ನಿನಲ್ಲಿ ಆಡಳಿತಗಾರರಿಗೆ ಮಾರ್ಗದರ್ಶನ ಮಾಡುವ ಸಲುವಾಗಿ ಗ್ಯಾಸೆಟಿಯರ್ ಅಥವಾ ಮ್ಯಾನ್ಯುಯಲ್‌ಗಳನ್ನು ತಯಾರಿಸುವ ಸಂಪ್ರದಾಯವು ಆರಂಭವಾಗಿತ್ತು. ಇದೇ ಹಿನ್ನೆಲೆಯಲ್ಲಿ ಭಾರತದಲ್ಲೂ ತಮ್ಮ ಆಡಳಿತವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ದೃಷ್ಟಿಯಿಂದ ಆಡಳಿತಗಾರರಿಗೆ ತಾವು ಆಡಳಿತ ಮಾಡಬೇಕಾದ ಪ್ರಾಂತ್ಯ/ಜಿಲ್ಲೆಗಳನ್ನು ಪರಿಚಯಿಸುವ ದೃಷ್ಟಿಯಿಂದ ಮ್ಯಾನ್ಯುಯಲ್ ಅಥವಾ ಗ್ಯಾಸೆಟಿಯರ್‌ಗಳನ್ನು ಸಂಕಲಿಸುವ ಕಾರ್ಯವನ್ನು ಆರಂಭಿಸಲಾಯಿತು.

ಮೈಸೂರು ಸಂಸ್ಥಾನದಲ್ಲಿಯೂ ಗ್ಯಾಸೆಟಿಯರ್ ಸಂಪ್ರದಾಯವು ಈ ಹಿನ್ನೆಲೆಯಲ್ಲಿ ಆರಂಭವಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಥಮ ನಿರ್ದೇಶಕರಾಗಿದ್ದ ಬೆಂಜಮಿನ್ ಲೂಯಿಸ್ ರೈಸ್ ಅವರು ಬೆಂಗಳೂರಿನಲ್ಲಿ ತಮ್ಮ ಪ್ರೌಢ ಶಿಕ್ಷಣವನ್ನು ಹೊಂದಿದ್ದರು. ಅವರು ಮೈಸೂರು ಮತ್ತು ಕೂರ್ಗ್ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ 1877–78ರಲ್ಲಿ ಮೂರು ಗ್ಯಾಸೆಟಿಯರ್ ಸಂಪುಟಗಳನ್ನು ಪ್ರಥಮ ಬಾರಿಗೆ ಪ್ರಕಟಿಸಿದ್ದು ಆಗ ದೇಶದಲ್ಲೇ ಅತ್ಯುತ್ತಮ ಬೌದ್ಧಿಕ ಸಾಧನೆಯೆಂದು ಪರಿಗಣಿಸಲ್ಪಟ್ಟಿತ್ತು. ನಂತರ ರಾಷ್ಟ್ರದ ಹಂತದಲ್ಲಿ ಇಂಪೀರಿಯಲ್ ಗ್ಯಾಸೆಟಿಯರ್ ಸಂಪುಟಗಳನ್ನು 1881ರಲ್ಲಿ ಸಂಪಾದಿಸಿದ ಸರ್ ವಿಲಿಯಮ್ ವಿಲ್ಸನ್ ಹಂಟರ್‌ರವರು ಬಿ.ಎಲ್.ರೈಸ್ ಅವರ ಪ್ರಥಮ ಮೈಸೂರು ಮತ್ತು ಕೂರ್ಗ್ ಗ್ಯಾಸೆಟಿಯರ್ ಸಂಪುಟಗಳ ಕಾರ್ಯವನ್ನು ತಮ್ಮ ಮುನ್ನುಡಿಯಲ್ಲಿ ಅತ್ಯುತ್ತಮ ಹಾಗೂ ಪರಿಪಕ್ವಯುತ ಸಂಪಾದನಾ

ಗ್ರಂಥಗಳೆಂದು ಶ್ಲಾಘಿಸಿರುತ್ತಾರೆ. ನಂತರ 1897ರಲ್ಲಿ ಬಿ.ಎಲ್.ರೈಸ್ ಅವರೇ ಮೈಸೂರು ಗ್ಯಾಸೆಟಿಯರ್ ಸಂಪುಟಗಳನ್ನು ಮೂರು ಸಂಪುಟಗಳಲ್ಲಿ ಪುನಃ ಪರಿಷ್ಕರಿಸಿ ಪ್ರಕಟಿಸಿದರು. ಬಿ.ಎಲ್.ರೈಸ್‌ರವರು ತಮ್ಮ 1877ರ ಸಂಪುಟದ ಮುನ್ನುಡಿಯಲ್ಲಿ ಎಚ್.ವೆಲ್ಲೆಸ್ಲಿ ಮತ್ತು ಕೃಷ್ಣ ಅಯ್ಯಂಗಾರ್ ಎಂಬ ಅಧಿಕಾರಿಗಳು 1869ರಲ್ಲೇ ಮೈಸೂರು ಮತ್ತು ಕೋಲಾರ ಜಿಲ್ಲೆಗೆ ಸಂಬಂಧಿಸಿದ ಗ್ಯಾಸೆಟಿಯರ್ ಸಂಪುಟಗಳನ್ನು ಕ್ರಮವಾಗಿ ಸಿದ್ಧಗೊಳಿಸಿ ಹಸ್ತಪ್ರತಿಗಳನ್ನು ತಯಾರಿಸಲಾಗಿತ್ತೆಂದು ತಿಳಿಸಿರುತ್ತಾರೆ. ಆದರೆ ನಮಗೆ ಈ ಸಂಪುಟಗಳು ಇಲ್ಲಿಯವರೆಗೂ ಲಭ್ಯವಿಲ್ಲದಾಗಿವೆ.

ಉತ್ತರ ಕರ್ನಾಟಕದ ಭಾಗವು ಮುಂಬೈ ಪ್ರೆಸಿಡೆನ್ಸಿಯ ಆಡಳಿತದಲ್ಲಿದ್ದ 1883 ರಿಂದ 1884ರ ನಡುವೆ ಸರ್.ಜೇಮ್ಸ್‌ಕ್ಯಾಂಬೆಲ್ ಅವರು ಬೆಳಗಾವಿ, ಧಾರವಾಡ, ಬಿಜಾಪುರ ಮತ್ತು ಕೆನರಾ (ಉತ್ತರ ಕನ್ನಡ) ಜಿಲ್ಲೆಗಳ ಗ್ಯಾಸೆಟಿಯರ್ ಸಂಪುಟಗಳನ್ನು ಪ್ರಕಟಿಸಿದರು. ಮದ್ರಾಸ್ ಪ್ರಾಂತ್ಯದಲ್ಲಿದ್ದ ಸೌತ್ ಕೆನರಾ (ದಕ್ಷಿಣ ಕನ್ನಡ) ಜಿಲ್ಲೆಯ ಮ್ಯಾನ್ಯುಯಲ್ ಸಂಪುಟವನ್ನು ಎರಡು ಭಾಗಗಳಲ್ಲಿ(1894–1895) ಜಾನ್ ಸ್ಟರ್ರೋಕ್ ಮತ್ತು ಹೆರಾಲ್ಡ್ ಎ.ಸ್ಟೂಯರ್ಟ್ ಅವರ ಸಂಪಾದಕತ್ವದಲ್ಲಿ ಮದರಾಸ್ ಪ್ರಾಂತೀಯ ಸರ್ಕಾರವು ಪ್ರಕಟಿಸಿತು. ಈ ಎಲ್ಲ ಗ್ಯಾಸೆಟಿಯರ್‌ಗಳಿಗೆ 1900–1924ರ ಅವಧಿಯಲ್ಲಿ ಹಲವಾರು ಪುರವಣಿಗಳು ಬಂದವು. ಇದೇ ರೀತಿ ಬಳ್ಳಾರಿ ಜಿಲ್ಲಾ ಮ್ಯಾನ್ಯುಯಲ್ ಸಂಪುಟವನ್ನು ಜಾನ್ ಕೆಲ್‌ಸಾಲ್ 1872ರಲ್ಲಿ ಪ್ರಥಮ ಬಾರಿಗೆ ಪ್ರಕಟಿಸಿದ್ದು, ಅದನ್ನು ಪುನ: ಪರಿಷ್ಕರಿಸಿ ವಿಲಿಯಮ್ ಫ್ರಾನ್ಸಿಸ್‌ರವರು 1904ರಲ್ಲಿ ಪ್ರಕಟಿಸಿದರು.

ರಾವ್ ಬಹದ್ದೂರ್ ಸಿ. ಹಯವದನರಾವ್ ಅವರ ಶ್ರಮದಿಂದ ಅತ್ಯಂತ ವ್ಯಾಪಕ ಸರ್ವೇಕ್ಷಣೆಯ ಫಲವಾಗಿ ಅಂದಿನ ಮೈಸೂರು ರಾಜ್ಯದ ಗ್ಯಾಸೆಟಿಯರಿನ ಐದು ಸಂಪುಟಗಳನ್ನು ಪೂರ್ಣವಾಗಿ 1939ರ ವೇಳೆಗೆ ಪ್ರಾಂತೀಯ ಸರ್ಕಾರವು ಹೊರತಂದಿತು. ಈ ಪ್ರಯತ್ನವು ಮೈಸೂರು ಗ್ಯಾಸೆಟಿಯರ್ ಇಲಾಖೆಯ ಸ್ಥಾಪನೆಗೆ ಅಂಕುರವಾಯಿತೆಂದರೆ ಅತಿಶಯೋಕ್ತಿಯಲ್ಲ.

## ಪ್ರಸ್ತುತ ಮಾರಾಟಕ್ಕೆ ಲಭ್ಯವಿರುವ ಪ್ರತಿಗಳ ದರಪಟ್ಟಿ

| ಹೆಸರು | | ಪ್ರಕಟವಾದ ವರ್ಷ | ಬೆಲೆ (ರೂ) |
|---|---|---|---|
| ರಾಜ್ಯ ಗ್ಯಾಸೆಟಿಯರ್ (ಆಂಗ್ಲ) | ಭಾಗ ಖ | 1982 | 55 |
| | ಭಾಗ ಖಖ | 1983 | 65 |
| ರಾಜ್ಯ ಗ್ಯಾಸೆಟಿಯರ್ (ಕನ್ನಡ) | ಭಾಗ ಖಖಖ | 1986 | 40 |
| ಮೈಸೂರು ಜಿಲ್ಲೆ (ಆಂಗ್ಲ) | | 1988 | 75 |
| ಬೆಂಗಳೂರು ಗ್ರಾಮಾಂತರ | | 1989 | 75 |
| ಬೆಂಗಳೂರು ಜಿಲ್ಲೆ (ಆಂಗ್ಲ) | | 1990 | 100 |
| ಕೊಡಗು ಜಿಲ್ಲೆ (ಕನ್ನಡ) | | 1990 | 100 |
| ರಾಜ್ಯ ಗ್ಯಾಸೆಟಿಯರ್ ದಶವಾರ್ಷಿಕ ಪುರವಣಿ (ಆಂಗ್ಲ) | | 1994 | 130 |
| ಧಾರವಾಡ (ಕನ್ನಡ) | | 1995 | 175 |
| ಕರ್ನಾಟಕ ಕೈಪಿಡಿ (ಆಂಗ್ಲ) | | 1996 | 100 |
| ರಾಜ್ಯ ಗ್ಯಾಸೆಟಿಯರ್ ದಶವಾರ್ಷಿಕ ಪುರವಣಿ (ಕನ್ನಡ) | | 1996 | 181 |
| ಕರ್ನಾಟಕ ಕೈಪಿಡಿ (ಕನ್ನಡ) | | 1996 | 116 |
| ಗುಲಬರ್ಗಾ (ಕನ್ನಡ) | | 1997 | 200 |
| ವಿಜಾಪುರ ಜಿಲ್ಲೆ (ಕನ್ನಡ) | | 1999 | 242 |
| ವಿಜಾಪುರ ಜಿಲ್ಲೆ (1884ರ ಪುನರ್ ಮುದ್ರಣ) | | 2001 | 330 |
| ಧಾರವಾಡ ಜಿಲ್ಲೆ (ಆಂಗ್ಲ) | | 2003 | 350 |

| | | | |
|---|---|---|---|
| ಮಂಡ್ಯ ಜಿಲ್ಲೆ (ಕನ್ನಡ) | | 2003 | 250 |
| ದಕ್ಷಿಣ ಕನ್ನಡ ಜಿಲ್ಲೆ (1894ರ ಪುನರ್ ಮುದ್ರಣ) | | 2003 | 170 |
| ಕೆನರಾ ಜಿಲ್ಲೆ (1884ರ ಪುನರ್ ಮುದ್ರಣ) | | 2003 | 250 |
| ಧಾರವಾಡ (1884ರ ಪುನರ್ ಮುದ್ರಣ) | | 2003 | 235 |
| **ಸಿ.ಡಿ.ಆವೃತ್ತಿಗಳು** | | | |
| 9 ಸಿ.ಡಿ.ಗಳ ಒಂದು ಸೆಟ್ | | 2003 | 1000 |
| ಧಾರವಾಡ ಜಿಲ್ಲಾ (ಆಂಗ್ಲ ಅನುವಾದ) | | 2003 | 150 |
| ಮಂಡ್ಯ ಜಿಲ್ಲೆ (ಪರಿಷ್ಕೃತ ಕನ್ನಡ ಆವೃತ್ತಿ) | | 2003 | 125 |

**ಪ್ರತಿಗಳು ದೊರೆಯುವ ಸ್ಥಳ**

ಸರ್ಕಾರಿ ಕೇಂದ್ರ ಪುಸ್ತಕ ಮಳಿಗೆ*, ಡಾ|| ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-1
ಸರ್ಕಾರಿ ಶಾಖಾ ಮುದ್ರಣಾಲಯಗಳು, ಮೈಸೂರು, ಧಾರವಾಡ ಮತ್ತು ಗುಲಬರ್ಗಾ
ವಿ.ಸೂ. ಲಭ್ಯವಿರುವ ಎಲ್ಲ ಗ್ಯಾಸೆಟಿಯರ್‌ಗಳನ್ನು ಒಮ್ಮೆಗೇ ಖರೀದಿಸಿದಲ್ಲಿ ಶೇಕಡ 25ರಷ್ಟು ಸೋಡಿ ನೀಡಲಾಗುವುದು.

* ಸರ್ಕಾರಿ ಕೇಂದ್ರ ಪುಸ್ತಕ ಮಳಿಗೆಯಿಂದ ನಗದು ಅಥವಾ ಡಿ.ಡಿ.ಮೂಲಕ (ನಿರ್ದೇಶಕರು, ಮುದ್ರಣ ಮತ್ತು ಲೇಖನ ಸಾಮಗ್ರಿ ಇವರ ಹೆಸರಲ್ಲಿರಬೇಕು) ಗ್ಯಾಸೆಟಿಯರ್ ಗ್ರಂಥಗಳನ್ನು ಖರೀದಿಸಬಹುದಾಗಿದ್ದು ಉಚಿತವಾಗಿ ಅಂಚೆ ಸೇವೆ ಪಡೆಯಬಹುದಾಗಿದೆ.

**ಕರ್ನಾಟಕ ಗ್ಯಾಸೆಟಿಯರ್ ಇಲಾಖೆ**
8ನೇ ಮಹಡಿ, ಜಲಮಂಡಲಿ ಕಟ್ಟಡ, ಕಾವೇರಿ ಭವನ, ಬೆಂಗಳೂರು-560 009
ದೂರವಾಣಿ: 080-22213474, ಫ್ಯಾಕ್ಸ್: 080-22243293
ಇಮೇಲ್: kargaz @ mail.kar.nic.in, ವೆಬ್‌ಸೈಟ್ http://kannadasiri.kar.nic.in/gazetteer